# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.1698/2022

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಃ | ಶೇಖರಪ್ಪ | ಸಿಡಬ್ಲ್ಯೂ -2 |
| ತಂದೆ/ ಗಂಡನ ಹೆಸರು | ಃ | ನಾಗಪ್ಪ | ಪಿ ಡಬ್ಲ್ಯೂ-2 |
| ವಯಸ್ಸು | ಃ | 48 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸಸ್ಥಳ | ಃ | ಮದಕರಿಪುರ ಗ್ರಾಮ | ದಿಃ04-12-2024. |

### ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ಸಾಕ್ಷಿಗೆ ನಿಪಿಃ2 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃಃ2(ಬಿ) ಅಂತ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಒಂದು ವರೆ ವರ್ಷಗಳ ಹಿಂದೆ ಚಳ್ಳಕೆರೆ ಪೊಲೀಸ ಠಾಣೆಯಿಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೇಗೆ ಮಾಡಿರುತ್ತಾನೆ. ನನ್ನ ಸಮಕ್ಷಮ ಯಾವುದೇ ಮಹಜರ ಕ್ರಮ ಜರುಗಿಸಿಲ್ಲ. ನನ್ನ ಜೊತೆಗೆ ಬೇರೆ ಯಾರು ಸಹಿ ಮಾಡಿಲ್ಲ. ಸಾಕ್ಷಿಗೆ ನಿಪಿಃ3 ರ ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನುನ ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ಮೀರಸಾಬಿಹಳ್ಳಿಗೆ ಹೋಗವ ರಸ್ತೆಯಲ್ಲಿ ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿಃ4 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ)ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಒಂದು ವರೆ, ಎರಡು ವರ್ಷಗಳ ಹಿಂದೆ ಪೊಲೀಸ ಠಾಣೆಯಿಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆಗೆ ಬೇರೆ ಯಾರು ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತು ಪಡಿಸಿಲ್ಲ. ಸಾಕ್ಷಿಗೆ ನಿಪಿಃ5 ರಿಂದ ನಿಪಿಃ8 ರ ಭಾವಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ16-02-2022 ರಂದು ಅಪಘಾತ ಸ್ಥಳದಲ್ಲಿ ಚಾಸಾ-1 ರವರು ಸ್ಥಳ ತೋರಿಸಿದಂತೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10-45-ರವರೆಗೆ ನಿಪಿಃ2 ರಂತೆ ಸ್ಥಳ ಪಂಚನಾಮೆಯ ಜರುಗಿಸಿ, ನಿಪಿಃ3 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಚಳ್ಳಕೆರೆ ಪೊಲೀಸ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ಕೆಎ-16-ಇಇ-7502 ಬೈಕ್ ನ್ನು ಚಾಸಾ-1 ರವರು ನೋಡಿ ಗುರುತಿಸಿದ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಪಿಃ4 ರಂತೆ ಬೆಳಿಗ್ಗೆ 11-00 ರಿಂದ 11-40 ರವರಗೆ ನಿಪಿಃ4 ರಂತೆ ವಾಹನ ಪರಿಶೀಲನಾ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ5 ರಿಂದ ನಿಪಿಃ8 ರ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಕುರಿತು ಸಂಪೂರ್ಣ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಇರುವುದಿಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ